**ದಿನಾಂಕ: 02.02.2019 ರಂದು ನಡೆದ ವಾರ್ಡ್ ನಂ. 74 ರ ಶಕ್ತಿಗಂಪತಿನಗರದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಸಭೆಗೆ ಹಾಜರಾಗಿದ್ದ ಅಧ್ಯಕ್ಷರು, ಹಾಗೂ ಸದಸ್ಯರು ಮತ್ತು ಅಧಿಕಾರಿಗಳು/ಸಿಬ್ಬಂದಿ

1) ಶ್ರೀಮತಿ ಗಂಗಮ್ಮ – ಅಧ್ಯಕ್ಷರು
2) ಕಿರಿಯ ಇಂಜಿನಿಯರ್ ವಾರ್ಡ್ ನಂ. 74 – ಕಾರ್ಯದರ್ಶಿ ಹಾಗೂ ಸಂಚಾಲಕರು
3) ಶ್ರೀ ಎಂ.ಬಿ. ನಾಗರಾಜು – ಸದಸ್ಯರು – ಗೈರುಹಾಜರಿ
4) ಶ್ರೀ ರವಿ – ಸದಸ್ಯರು
5) ಶ್ರೀ ಸಾಕಮ್ಮ – ಸದಸ್ಯರು – ಗೈರುಹಾಜರಿ
6) ಶ್ರೀಮತಿ ಎ. ವಿಜಯಲಕ್ಷ್ಮೀ – ಸದಸ್ಯರು
7) ಶ್ರೀಮತಿ ರಾಧ – ಸದಸ್ಯರು
8) ಮೆ॥ ಶ್ರೀ ಶನೇಶ್ವರಸ್ವಾಮಿ ಟೆಂಪಲ್ ಟ್ರಸ್ಟ್ : ಸದಸ್ಯರು
9) ಮೆ॥ ಸರ್.ಎಂ. ವಿಶ್ವೇಶ್ವರಯ್ಯ ಕ್ಷೇಮಾಭಿವೃದ್ಧಿ ಸಮಿತಿ: ಸದಸ್ಯರು
10) ಶ್ರೀ ಬಿ. ನಾಗರಾಜು – ಸದಸ್ಯರು – ಗೈರುಹಾಜರಿ
11) ಶ್ರೀ ದೊಡ್ಡಯ್ಯ – ಸದಸ್ಯರು
12) ಶ್ರೀ ರವಿಕುಮಾರ್ – ಸದಸ್ಯರು
13) ಶ್ರೀಮತಿ ಡಾ॥ ಶ್ಯಾಮಲ – ಆರೋಗ್ಯ ವೈದ್ಯಾಧಿಕಾರಿಗಳು
14) ಶ್ರೀ ಎನ್. ವೆಂಕಟೇಶ್ – ಹಿರಿಯ ಆರೋಗ್ಯ ಪರಿವೀಕ್ಷಕರು
15) ಶ್ರೀ ಎಂ. ಚಂದ್ರಪ್ಪ – ರೆವೆನ್ಯೂ ಇನ್ಸ್‌ಪೆಕ್ಟರ್
16) ಶ್ರೀ ಶೇಖರ್ ನಾಯಕ್ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
17) ಶ್ರೀ ಸಾಲೋಮನ್ ಜಾಕಬ್ – ಕಿ.ಆ.ಪ. ಫ.ತ್ಯಾ.ನಿ.
18) ಶ್ರೀ ಬಿ.ಕೆ. ಶಂಕರರಾಜ್ – ಸ.ಅ. ಬೆಸ್ಕಾಂ

ಶ್ರೀಮತಿ ಗಂಗಮ್ಮ ರಾಜಣ್ಣ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 02.02.2019 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 74ರ ಶಕ್ತಿಗಣಪತಿನಗರ ವಾರ್ಡ್ ಸದಸ್ಯರ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ಸಭೆಯ ಅರಂಭದಲ್ಲಿ ಹಾಜರಾದ ಅಧ್ಯಕ್ಷರು, ಸದಸ್ಯರು ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಕಾರ್ಯದರ್ಶಿ ಹಾಗೂ ವಾರ್ಡ್‌ನ ಕಿರಿಯ ಅಬಿಯಂತರರು ಸ್ವಾಗತಿಸಿದರು ಹಾಗೂ ಕಳೆದ ವಾರ್ಡ್ ಕಮಿಟಿಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರಿಸಿ ಸಂಬಂಧಪಟ್ಟ ಇಲಾಖೆಯವರು ನೀಡಿದ ವರದಿ ಹಾಗೂ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ವಿವರಿಸಿದರು.

ಸಭೆಯ ಆರಂಭದಲ್ಲಿ ಕೆಳಕಂಡ ವಿಷಯಗಳನ್ನು ಅಧ್ಯಕ್ಷರು ಸದಸ್ಯರು ಹಾಗೂ ಸಾರ್ವಜನಿಕರು ಚರ್ಚಿಸಿದರು ಹಾಗೂ ಸಂಬಂಧಪಟ್ಟ ಇಲಾಖೆಯವರು ಕೂಡಲೇ ಕ್ರಮ ವಹಿಸಲು ತೀರ್ಮಾನಿಸಿದರು.

1) **ವಿಷಯ:** ಚಂದ್ರಪ್ಪ ರಸ್ತೆಯಲ್ಲಿನ ನಂ. 138ರ ಮನೆಯಲ್ಲಿ ಹಸುಗಳನ್ನು ಸಾಕಿಕೊಂಡಿದ್ದು, ಸ್ವಚ್ಛತೆಯ ನಿರ್ವಹಣೆ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಗಲೀಜನ್ನು ನೇರವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮಾರ್ಗಕ್ಕೆ ಸಂಪರ್ಕಕ್ಕೆ ನೀಡಿರುತ್ತಾರೆ ಹಾಗೂ ಸ್ವಚ್ಛಗೊಳಿಸುತ್ತಿರುವುದಿಲ್ಲವೆಂದು ಕಮಿಟಿ ಅಧ್ಯಕ್ಷರು ವಿಷಯವನ್ನು ಸಮಿತಿಯಲ್ಲಿ ಪ್ರಸ್ತಾಪಿಸಿದರು.

**ತೀರ್ಮಾನ:-** ಆದ್ದರಿಂದ ಕೂಡಲೇ ಸಂಬಂಧಪಟ್ಟ ಇಲಾಖೆ ರವರು ಕ್ರಮ ವಹಿಸಲು ಅಧ್ಯಕ್ಷರು ಹಾಗೂ ಇತರೆ ಸದಸ್ಯರು ಚರ್ಚಿಸಿ ಕ್ರಮ ವಹಿಸಲು ಸೂಚಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಇಂಜಿನಿಯರ್ ಶೇಖರ್ ನಾಯಕ್ ಕೂಡಲೇ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

2) **ವಿಷಯ:** ಚಂದ್ರಪ್ಪ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಕಲ್ವರ್ಟ್‌ಗಳಲ್ಲಿನ ಗಲೀಜನ್ನು ಘನತ್ಯಾಜ್ಯ ವಿಭಾಗದವರು ಸ್ವಚ್ಛಗೊಳಿಸದಿರುವ ಬಗ್ಗೆ ಸದಸ್ಯರಾದ ಶ್ರೀ ಮೋಹನ್, ಸದಸ್ಯರು ರವರು ಸಭೆಯಲ್ಲಿ ಚರ್ಚಿಸಿದರು.

**ತೀರ್ಮಾನ:** ಸಭೆಯಲ್ಲಿ ಹಾಜರಿದ್ದ, ಹಿರಿಯ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಈ ದಿನದಿಂದಲೇ ಕಾರ್ಯಪ್ರವೃತ್ತರಾಗಿ ಸ್ವಚ್ಛಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

3) **ವಿಷಯ:** ಶ್ರೀ ಚಂದ್ರೇಗೌಡ, ಶ್ರೀ ಹುತ್ತದ ವೆಂಕಟರಮಣ ಸ್ವಾಮಿ ಟ್ರಸ್ಟ್ ಅಧ್ಯಕ್ಷರು ಹಾಗೂ ಬಿ.ಇ.ಎಂ.ಎಲ್. ಲೇಔಟ್ ನಿವಾಸಿಗಳು ಕುವೆಂಪು ರಂಗಮಂದಿರದಲ್ಲಿ ಹೆಲ್ತ್ ಕ್ಯಾಂಪ್ ನಡೆಸಲು ಆರೋಗ್ಯಾಧಿಕಾರಿಗಳಾದ ಶ್ರೀಮತಿ ಡಾ॥ ಶ್ಯಾಮಲ ರವರಿಗೆ ಸಲಹೆ ನೀಡಿರುತ್ತಾರೆ.

**ತೀರ್ಮಾನ:-** ಈ ಬಗ್ಗೆ ಕೊಳಚೆ ಪ್ರದೇಶಗಳಲ್ಲಿ ಕ್ಯಾಂಪ್ ಮಾಡಲು ಮಾತ್ರ ಇಲಾಖಾ ಆದೇಶವಿದ್ದು, ಮೇಲಾಧಿಕಾರಿಗಳ ಗಮನಕ್ಕೆ ತರಬಯಸುತ್ತೇನೆ ಹಾಗೂ ಇಲಾಖೆಯವರು ಅನುಮತಿ ನೀಡಿದಲ್ಲಿ ತಮ್ಮ ಕೋರಿಕೆಯಂತೆ ಕ್ಯಾಂಪ್ ನಡೆಸಲಾಗುವುದೆಂದು ತಿಳಿಸಿದರು.

4) **ವಿಷಯ:** ಬೆಸ್ಕಾಂ ಇಲಾಖೆ ರವರು ಹೊಸದಾಗಿ ಕೇಬಲ್‌ಗಳನ್ನು ಬಿ.ಇ.ಎಂ.ಎಲ್. ಲೇಔಟ್‌ನಲ್ಲಿ ಹಾಗೂ ಶಕ್ತಿಗಣಪತಿನಗರದ ಎಲ್ಲಾ ಭಾಗಗಳಲ್ಲಿ ಅಳವಡಿಸಿದ್ದು, ರಸ್ತೆಗಳಲ್ಲಿ ಮಣ್ಣನ್ನು ತೆಗೆದಿರುವುದಿಲ್ಲ ಹಾಗೂ ರಸ್ತೆಯ ಬದಿಗಳಲ್ಲಿ ಫುಟ್‌ಪಾತ್‌ಗಳಲ್ಲಿ ಬಿಟ್ಟಿರುವ ವಿದ್ಯುತ್ ಕಂಬಗಳಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗತ್ತಿದ್ದು, ಅಪಘಾತಗಳು ಉಂಟಾಗುತ್ತಿದ್ದು, ಕೂಡಲೇ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಶ್ರೀ ಚಂದ್ರೇಗೌಡ ರವರು ಸಭೆಯಲ್ಲಿ ಚರ್ಚಿಸಿರುತ್ತಾರೆ

**ತೀರ್ಮಾನ:** ಸದರಿ ವಿಷಯವನ್ನು ಸಮಿತಿಯು ಹಾಜರಿದ್ದ ಬೆಸ್ಕಾಂ ಇಲಾಖೆಯ ಸಹಾಯಕ ಇಂಜಿನಿಯರ್ ಶ್ರೀ ಶಂಕರ್‌ರಾಜ್ ರವರಿಗೆ ಕೂಡಲೇ ಕ್ರಮವಹಿಸಲು ಸೂಚಿಸಲಾಯಿತು.

5) **ವಿಷಯ:** ಶ್ರೀ ಹುತ್ತದ ವೆಂಕಟರಮಣ ಸ್ವಾಮಿ ದೇವಾಲಯದ ಹತ್ತಿರ ಸಿ.ಸಿ.ಟಿ.ವಿ ಕ್ಯಾಮೆರಾಗಳು ಅಳವಡಿಸಿದ್ದು, ಸಾರ್ವಜನಿಕರು ತ್ಯಾಜ್ಯಗಳನ್ನು ದೇವಸ್ಥನದ ಪರಿಮಿತಿಯಲ್ಲಿ ಹಾಕುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಬಿ.ಬಿ.ಎಂ.ಪಿ ವತಿಯಿಂದ ಮಾರ್ಷಲ್‌ಗಳನ್ನು ನೇಮಿಸಲು ಶ್ರೀ ಚಂದ್ರೇಗೌಡ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ.

**ತೀರ್ಮಾನ:** ಅಳವಡಿಸಿರುವ ಸಿ.ಸಿ.ಟಿ.ವಿ ಗಳನ್ನು ಪರಿಶೀಲಿಸಿ ಸಂಬಂಧಪಟ್ಟವರಿಗೆ ದಂಡ ವಿಧಿಸಲು ಘನತ್ಯಾಜ್ಯ ವಿಭಾಗ ರವರಿಗೆ ಸೂಚಿಸಿಲಾಯಿತು

6) **ವಿಷಯ:** ಮನೆ ನಂ 945, . ಹುಲಿಯೂರಮ್ಮ ದೇವಸ್ಥಾನದ ಹತ್ತಿರ ಚರಂಡಿಯಲ್ಲಿ ತ್ಯಾಜ್ಯ ತುಂಬಿರುತ್ತದ ಎಂಬುದಾಗಿ ಸಭೆಯಲ್ಲಿ ಚರ್ಚಿಸಿದರು.

**ತೀರ್ಮಾನ:** ಸದರಿ ತ್ಯಾಜ್ಯವನ್ನು ತೆಗೆಯಲು ಪರಿಸರ ಶಾಖೆಯವರಿಗೆ ಕ್ರಮವಹಿಸಲು ಸೂಚಿಸಲಾಯಿತು.

ವಾರ್ಡ್‌ನ ಕುಡಿಯುವ ನೀರಿನ ಸ್ಥಿತಿಗತಿಯ ಬಗ್ಗೆ ಹಾಗೂ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಸಮಿತಿಯು ಸಮಾಧಾನ ವ್ಯಕ್ತಪಡಿಸಿದರು. ಮುಂದಿನ ಸಭೇಗೆ ವಾರ್ಡ್‌ನ ಕುಂದುಕೊರತೆಗಳು ಹಾಗೂ ಇತರೆ ವಿಷಯಗಳನ್ನು ಚರ್ಚಿಸಲು ಎಲ್ಲಾ ಇಲಾಖಾ ಮೇಲ್ವಿಚಾರಕರು ಸಭೆಗೆ ತಪ್ಪದೇ ಹಾಜರಾಗಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಆರೋಗ್ಯ ಇಲಾಖಾವತಿಯ ಸಿಬ್ಬಂದಿಯವರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಅಂತಿಮಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ ಸಂಚಾಲಕರು
ವಾರ್ಡ್ ಸಂಖ್ಯೆ 74
ಶಕ್ತಿಗಣಪತಿನಗರ.

Gagana
ಅಧ್ಯಕ್ಷರು
ವಾರ್ಡ್ ಸಂಖ್ಯೆ 74
ಶಕ್ತಿಗಣಪತಿನಗರ.